ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ
ಕಾ ಮತ್ತು ಪಾ ವಿಭಾಗ,
ಚಾ.ವಿ.ಸ.ನಿ.ನಿ. ಮಡಿಕೇರಿ – 571201
Telephone No : 08274-255319

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
O & M Division,
CESC, Madikeri - 571201
Web site: www.cescmysore.org
E-mail ID : cesceemdk@gmail.com

Company Identity Number :- (CIN): U40109KA2004SGC035177

ಕ್ರಮಾಂಕ: ಕಾನಿಇಂ(ವಿ)/ಸಕಾನಿಇಂ(ಕ)/ಸಇಂ(ತಾಂ)/2021-22/ 4091 ದಿನಾಂಕ: 1-1-2022

## ಸಭೆಯ ನಡಾವಳಿಗಳು

**ದಿನಾಂಕ: 24.12.2021 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.**

ಸಭೆಯಲ್ಲಿ ಹಾಜರಿದ್ದವರು:-

1.. ಶ್ರೀ.ಎಂ.ಪಿ.ಅಶೋಕ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
2. ಶ್ರೀ.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
3. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
4. ಶ್ರೀ.ಕೆ.ಎಂ.ದಿಲೀಪ್ : ಸಹಾಯಕ ಇಂಜಿನಿಯರ್(ತಾಂ), ವಿರಾಜಪೇಟೆ
4. ಶ್ರೀ.ಹೆಚ್.ಎಸ್.ರಮೇಶ್ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಸೆಸ್ಕ್, ವಿರಾಜಪೇಟೆ.
5. ಶ್ರೀಮತಿ.ಬಿ.ಜಿ.ಚಂಪಾವತಿ : ಕಿರಿಯ ಇಂಜಿನಿಯರ್(ತಾಂ), ಸೆಸ್ಕ್, ಸಿದ್ದಾಪುರ.
6. ಶ್ರೀ.ಕೆ.ಎಸ್.ಸ್ವರಾಗ್ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಅಮ್ಮತ್ತಿ.
7. ಶ್ರೀ.ಸಿ.ಬಿ.ದೇವಯ್ಯ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಪಾಲಿಬೆಟ್ಟ.
8. ಶ್ರೀ.ಆಶಾಕುಮಾರಿ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ಸೆಸ್ಕ್, ವಿರಾಜಪೇಟೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಾದ ಶ್ರೀ.ಎಂ.ಪಿ.ಅಶೋಕ್ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು. ದಿನಾಂಕ:20.09.2021 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರ.ಸಂ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ.ಗಿರೀಶ್ ಗಣಪತಿ<br>ಶ್ರೀ.ಜಗದೀಶ್<br>ಮತ್ತು ನೇತ್ರಾವತಿ<br>ಗ್ರಾಮ ಪಂಚಾಯ್ತಿ ಸದಸ್ಯರುಗಳು, ಬಿ.ಶೆಟ್ಟಿಗೇರಿ<br>ದೂ: 948721014, 9483511740 | * ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ ಕೊಂಗಾಣ-ಕುಟ್ಟಂದಿ ಗ್ರಾಮಗಳಲ್ಲಿ ಬಹುತೇಕ ವಿದ್ಯುತ್ ಮಾರ್ಗವು ತೋಟದ ಮಧ್ಯಭಾಗದಲ್ಲಿ ಹಾದು ಹೋಗಿರುವುದರ ಜೊತೆಗೆ ವಿದ್ಯುತ್ ತಂತಿಯು ಕೆಳಮಟ್ಟದಲ್ಲಿರುವುದರಿಂದ ಕಾಫಿ, ಅಡಿಕೆ ಮತ್ತು ಇತರೆ ಕೃಷಿ ಚಟುವಟಿಕೆ ನಡೆಸುವಾಗ ವಿದ್ಯುತ್ ಅಪಘಾತವಾಗುತ್ತಿರುವುದಾಗಿ ತಿಳಿಸಿ ವಿದ್ಯುತ್ ಮಾರ್ಗವನ್ನು ರಸ್ತೆಯ ಬದಿಗೆ ಸ್ಥಳಾಂತರ ಮಾಡುವಂತೆ ಎಲ್ಲಾ ಸದಸ್ಯರು ಒಕ್ಕೊರಲಿನಿಂದ ಕೇಳಿದರು.<br>* ಹಾಲಿ ಇರುವ ವಿದ್ಯುತ್ ಮಾರ್ಗಗಳ ಜಂಗಲ್ ಕಟ್ಟಿ ಮಾಡುವಂತೆ ಕೋರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ವಿದ್ಯುತ್ ಮಾರ್ಗವು ತೀರಾ ಕೆಳಮಟ್ಟದಲ್ಲಿರುವ ಸ್ಥಳಗಳಲ್ಲಿ ಆನೆ ಕಾರಿಡಾರ್ ಯೋಜನೆಯಡಿ ಮಧ್ಯಂತರ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮತ್ತು 7.5 ಮೀ ಕಂಬಗಳ ಬದಲಿಗೆ 9 ಮೀ ಕಂಬಗಳನ್ನು ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿಗಳಿಗೆ ಸೂಚನೆ ನೀಡಿದರು.<br>* ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಹಾಲಿಯಿರುವ ವಿದ್ಯುತ್ ಮಾರ್ಗಗಳ ಅಕ್ಕಪಕ್ಕದಲ್ಲಿರುವ ಜಂಗಲ್ ಕಟ್ಟಿಂಗ್ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು, ಅಲ್ಲದೆ ಗ್ರಾಹಕರು ಕಡ್ಡಾಯವಾಗಿ ಫೈಬರ್ ಏಣಿಯನ್ನು ಬಳಸಿ ಅಪಘಾತ ತಡೆಯುವಂತೆ ಕೋರಿದರು ಮತ್ತು ಮಾರ್ಗದಾಳು ಈ |

| | | | |
|---|---|---|---|
| | | * ವಿದ್ಯುತ್ ಮಾರ್ಗವು ಕೆಳಮಟ್ಟದಲ್ಲಿರುವ ಬಗ್ಗೆ ಹಾಗೂ ಕಂಬಗಳು ಬಾಗಿರುವ ಮತು ಹಳೆಯ ವಿದ್ಯುತ್ ಕಂಬಗಳನ್ನು ಬದಲಿಸಲು ಈಗಾಗಲೇ ಫೆಬ್ರವರಿ–2020 ರಂದು ಬರೆದಿರುವುದಾಗಿ ತಿಳಿಸಿದರು.<br><br>* ಕುಟ್ಟಂದಿ–ಬಿ.ಶೆಟಿಗೇರಿ ವ್ಯಾಪ್ತಿಯ ಪರಿವರ್ತಕಗಳ ಕಂಬಗಳು ಶಿಥಿಲಗೊಂಡಿದ್ದು ಬದಲಿಸುವಂತೆ ಕೋರಿದರು.<br><br>* ಹಾಲಿ 11 ಕೆ.ವಿ ವಿದ್ಯುತ್ ಮಾರ್ಗದ ಹೆಚ್ಚಿನ ಭಾಗ ತೋಟಗಳ ಮಧ್ಯಭಾಗದಿಂದ ಹಾದುಹೋಗಿರುವುದರಿಂದ ಮಳೆಗಾಲದಲ್ಲಿ ಮರಗಿಡಗಳ ರೆಂಬೆ ಕೊಂಬೆಗಳು ಕಂಬಗಳ ಮೇಲೆ ಬೀಳುವ ಕಾರಣ ಆಗಾಗ ವಿದ್ಯುತ್ ಅಡಚಣೆಯುಂಟಾಗುತ್ತಿದೆ ಅಲ್ಲದೆ ಸದರಿ ಮಾರ್ಗವು ತೋಟದ ಮಧ್ಯವಿರುವುದರಿಂದ ಕೃಷಿ ಚಟುವಟಿಕೆ ಸಂಧರ್ಭ ವಿದ್ಯುತ್ ಅಪಘಾತಗಳು ಈ ಭಾಗದಲ್ಲಿ ಹೆಚ್ಚಾಗುತ್ತಿದೆ ಆದುದರಿಂದ ಸದರಿ 11 ಕೆ.ವಿ ವಿದ್ಯುತ್ ಮಾರ್ಗವನ್ನು ಸ್ಥಳಾಂತ ಮಾಡುವಂತೆ ಎಲ್ಲಾ ಬಿ.ಶೆಟ್ಟಿಗೇರಿ ಗ್ರಾಹಕರ ಪರವಾಗಿ ಕೇಳಿದರು. | ಬಗ್ಗೆ ತಿಳಿ ಹೇಳಲು ಅಗತ್ಯ ಕ್ರಮ ವಹಿಸುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿದರು.<br><br>* ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಬಾಗಿರುವ ವಿದ್ಯುತ್ ಕಂಬಗಳನ್ನು ತಕ್ಷಣ ಸರಿಪಡಿಸುವಂತೆ ಯಾವ ಭಾಗದಲ್ಲಿ ವಿದ್ಯುತ್ ತಂತಿಯು ಕೆಳಮಟ್ಟದಲ್ಲಿದೆಯೋ ಅಲ್ಲಿಗೆ ಮಧ್ಯಂತರ ಕಂಬ ಅಳವಡಿಸಲು ಸ್ಥಳ ಪರಿಶೀಲನೆ ನಡೆಸಿ ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>* ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಈ ಕೂಡಲೇ ಸ್ಥಳ ಪರಿಶೀಲನೆ ಅಗತ್ಯ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>* ಈ ಬಗ್ಗೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಾದ ಶ್ರೀ.ಪಿ.ಎಸ್.ಸುರೇಶ್ ರವರು ಉತ್ತರಿಸುತ್ತ ಸದರಿ ಭಾಗದಿಂದ ಈಗಾಗಲೇ ದೂರುಗಳು ಬಂದ ಕಾರಣ ಈಗಾಗಲೇ 11 ಕೆ.ವಿ. ವಿದ್ಯುತ್ ಮಾರ್ಗವನ್ನು ರಸ್ತೆ ಬದಿಗೆ ಸ್ಥಳಾಂತರ ಮಾಡಲು ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಿರುವುದಾಗಿ ತಿಳಿಸಿದರು. |
| 2 | ಬಲ್ಲಚಂಡ ವಿಜು<br>ಕುಟ್ಟಂದಿ ಗ್ರಾಮ<br>ದೂ.9480180603 | * ಕುಟ್ಟಂದಿ ಗ್ರಾಮದ ಸುಮಾರು 20 ಕ್ಕೂ ಹೆಚ್ಚು ಮನೆಗಳಿಗೆ ವಿದ್ಯುತ್ ವೋಲ್ಟೇಜ್ ಸಮಸ್ಯೆಯಿರುವುದರಿಂದ ಹೊಸ ಪರಿವರ್ತಕ ಅಳವಡಿಸುವಂತೆ ಕೋರಿದರು.<br><br>* ತಮ್ಮ ಕಾರ್ಮಿಕರ ವಸತಿ ಗೃಹದ ಆರ್.ಆರ್.ಸಂಖ್ಯೆ:24920 ರ ಜಂಪ್ ಆಗುತ್ತಿರುವುದರಿಂದ ಬಿಲ್ ಅಧಿಕ ಬರುತ್ತಿರುವುದಾಗಿ ತಿಳಿಸಿ ಹೊಸ ವಿದ್ಯುತ್ ಮಾಪಕ ಅಳವಡಿಸುವಂತೆ ಕೋರಿದರು.<br><br>* ತಮ್ಮ ತೋಟದಲ್ಲಿರುವ ವಿದ್ಯುತ್ ಕಂಬವು ತೀರಾ ಬಾಗಿಕೊಂಡಿದ್ದು ಸರಿಪಡಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಈ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಹೊಸ ಅಧಿಕ ವಿದ್ಯುತ್ ಪರಿವರ್ತಕಕ್ಕೆ ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>* ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಈ ಕೂಡಲೇ ಸ್ಥಳ ಪರಿಶೀಲನೆ ಮಾಪಕದ ಗಣಾಂಕವನ್ನು ಪರಿಶೀಲಿಸಿ ಬಿಲ್ಲನ್ನು ಸರಿಪಡಿಸಿಕೊಡುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>* ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಈ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಂಡಿರುವ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 3 | ಗಿರೀಶ್ ಗಣಪತಿ<br>ಪಂಚಾಯ್ತಿ ಸದಸ್ಯರು,<br>ಬಿ.ಶೆಟ್ಟಿಗೇರಿ<br>9448721014 | * ಕಾಕೆಮನೆ–ಬಿ.ಶೆಟ್ಟಿಗೇರಿ ಅಂಬಲ ಪ್ರದೇಶಗಳ ಸುಮಾರು 20ಕ್ಕೂ ಮನೆಗಳಿಗೆ ವೋಲ್ಟೇಜ್ ಸಮಸ್ಯೆಯಿರುವುದರಿಂದ ಹೊಸ ಪರಿವರ್ತಕ ಅಳವಡಿಸಿಕೊಡುವಂತೆ ಸದರಿ ಪ್ರದೇಶದ ಜನರು ಬಿ.ಶೆಟ್ಟಿಗೇರಿ ಪಂಚಾಯ್ತಿಗೆ ಪತ್ರ ಬರೆದಿರುತ್ತಾರೆ, ಆದುದರಿಂದ ಸದರಿ ಪ್ರದೇಶಕ್ಕೆ ಹೊಸ ಪರಿವರ್ತಕ ಅಳವಡಿಸುವಂತೆ ಸದರಿ ಪ್ರದೇಶದ ಜನರ ಪರವಾಗಿ ಕೋರಿದರು.<br><br>* ಬಿ.ಶೆಟ್ಟಿಗೇರಿ ಪಂಚಾಯ್ತಿಯ ನೀರು ಸರಬರಾಜಿಗೆ ಅಳವಡಿಸಿದ್ದ ಮಾಪಕವನ್ನು ಕಡಿತಗೊಳಿಸಿ ಸೆಸ್ಕ್ ಕಛೇರಿಗೆ ನೀಡಲಾಗಿದ್ದು, ಸದರಿ ನೀರು ಸರಬರಾಜು ಸದ್ಯ ಅವಶ್ಯವಿರುವುದರಿಂದ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಈ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಂಡಿರುವ ಬಗ್ಗೆ ತಮಗೆ ವರದಿ ಮಾಡುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು.<br><br>* ಸದರಿ ನೀರು ಸರಬರಾಜು ಸ್ಥಾವರದ ಆರ್.ಆರ್.ಸಂಖ್ಯೆ ನೀಡಿದಲ್ಲಿ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು, ಸದರಿ ಆರ್.ಆರ್.ಸಂಖ್ಯೆಯು ಈಗಾಗಲೇ ಶಾಶ್ವತವಾಗಿ ನಿಲುಗಡೆಗೊಂಡಿದ್ದಲ್ಲಿ, ಹೊಸ ಸಂಪರ್ಕ ಪಡೆದುಕೊಳ್ಳುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಸಲಹೆ ನೀಡಿದರು. |

| | | | |
|---|---|---|---|
| 4 | ಅಬಿನ್<br>ಕೊಟೋಳಿ ಗ್ರಾಮ<br>9945402784 | * ಕೊಟೋಳಿ ಗ್ರಾಮದಲ್ಲಿನ ತಮ್ಮ ವಾಸದ ಮನೆಗೆ ಸದ್ಯ ವಿದ್ಯುತ್ ಸಂಪರ್ಕ ಇರುವುದಿಲ್ಲ ಆದುದರಿಂದ ಯು.ಹೆಚ್.ಹೆಚ್ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು ಅಲ್ಲದೆ ತಮ್ಮ ಪಕ್ಕದ ಮನೆಗೆ ನೀಡಲಾಗಿರುವ ವಿದ್ಯುತ್ ಸೇವಾ ತಂತಿಯು ತೀರಾ ಉದ್ದವಾಗಿದ್ದು ಸುಮಾರು ಹತ್ತು ವರ್ಷಗಳಿಂದ ತಮ್ಮ ಮನೆಯ ಪಕ್ಕದಲ್ಲೆ ಹಾದು ಹೋಗಿದ್ದು ಸರಿಪಡಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಯು.ಹೆಚ್.ಹೆಚ್ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ಈಗಾಗಲೇ ಸಾಕಷ್ಟು ಸಮಯ ನೀಡಲಾಗಿತ್ತು ಆದರೆ ತಾವುಗಳು ನಿಗಧಿತ ಸಮಯದಲ್ಲಿ ಅರ್ಜಿ ಹಾಗು ಅಗತ್ಯ ದಾಖಲೆಗಳನ್ನು ನೀಡಿರುವುದಿಲ್ಲ ಆದುದರಿಂದ ಸದರಿ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಿಲ್ಲ ಆದರೆ ತಾವುಗಳು ತಮ್ಮ ಗ್ರಾಮ ಪಂಚಾಯ್ತಿಯಿಂದ ನಿರಾಕ್ಷೇಪಣ ಪತ್ರ ಪಡೆದು ವಿದ್ಯುತ್ ಗುತ್ತಿಗೆದಾರರ ಮುಖಾಂತರ ಅರ್ಜಿ ಸಲ್ಲಿಸದಲ್ಲಿ ಕೂಡಲೇ ವಿದ್ಯುತ್ ಸಂಪರ್ಕ ನೀಡಲಾಗುವುದೆಂದು ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು. |
| 5 | ವೀಣಾ ಎನ್.ಎಂ<br>ಬಿ.ಶೆಟ್ಟಗೇರಿ ಗ್ರಾಮ | * ತಮ್ಮ ವಿದ್ಯುತ್ ಸ್ಥಾವರ ಸಂಖ್ಯೆ:42206 ರ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದ್ದು ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ತಮ್ಮ ಸ್ಥಾವರದ ವಿದ್ಯುತ್ ಆರ್.ಆರ್.ಸಂಖ್ಯೆ ಬಾಕಿ ಮೊತ್ತವನ್ನು ಬಾಕಿ ಪಾವತಿಸಿದಲ್ಲಿ ವಿದ್ಯುತ್ ಸಂಪರ್ಕ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ, ಮುಂದಿನ ದಿನಗಳಲ್ಲಿ ವಿದ್ಯುತ್ ಬಾಕಿ ಮಾಡಿಕೊಳ್ಳದೆ ಅದೇ ತಿಂಗಳು ಪಾವತಿಸುವಂತೆ ತಿಳಿಸಿದರು. |

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ವಿಭಾಗ
ಚಾ.ವಿ.ಸ.ನಿ.ನಿ., ಮಡಿಕೇರಿ.

ಪ್ರತಿಯನ್ನು:-

1. ಮಾನ್ಯ ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ., ಮೈಸೂರು ರವರ ದಯಾಪರವಗಾಹನೆಗೆ ಸಲ್ಲಿಸಲಾಗಿದೆ.
2. ಅಧೀಕ್ಷಕ ಇಂಜಿನಿಯರ್ (ವಿ),ಕಾ ಮತ್ತು ಪಾ ವೃತ್ತ, ಶ್ರೀ ಹರ್ಷ ರಸ್ತೆ, ಮೈಸೂರು. ಇವರ ದಯಾಪರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ-ವಿಭಾಗ, ವಿರಾಜಪೇಟೆ ಉಪ-ವಿಭಾಗ ರವರ ಮಾಹಿತಿಗಾಗಿ
4. ಸಇಂ(ವಿ)/ಮುಕ